


# ಕರ್ನಾಟಕದಲ್ಲಿ ಭಾವಧಾರೆಗೆ ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ಕೊಡುಗೆ

**ಡಾ. ಹೆಚ್. ಎನ್. ಮುರಳೀಧರ**

ರಾಮಕೃಷ್ಣ ಭಾವಧಾರೆಯಲ್ಲಿ ಸಾಹಿತ್ಯ ಸೇವೆ ಕೂಡ ಒಂದು ಮಹತ್ವದ ಚಟುವಟಿಕೆಯಾಗಿದೆ. ದಿವ್ಯತ್ರಯರ ಜೀವನ, ಆದರ್ಶ, ಉಪದೇಶಗಳ ಬೋಧನೆಗಳಲ್ಲದೆ ತತ್ತ್ವ, ಅಧ್ಯಾತ್ಮ, ಯೋಗ, ಸಂಸ್ಕೃತಿ ಈ ವಿಷಯಗಳ ಬಗ್ಗೆ ಸಾಹಿತ್ಯದ ಮೂಲಕ ಕಳೆದ ನೂರು ವರ್ಷಗಳಲ್ಲಿ ಜನಸಾಮಾನ್ಯರನ್ನು ತಲುಪುವುದು ಸಾಧ್ಯವಾಗಿದೆ. ಈ ಕುರಿತು ವಿವೇಚಿಸಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ಉತ್ತಮ ವಾಗ್ಮಿಗಳು ಹಾಗೂ ಲೇಖಕರಾಗಿರುವ ಅವರು ದಿವ್ಯತ್ರಯರನ್ನು ಕುರಿತು ಆಳವಾಗಿ ಅಧ್ಯಯನ ಮಾಡಿದ್ದಾರೆ ಹಾಗೂ ಹಲವು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ಪರಿಧಿ ವಿಶಾಲವಾಗಿರುವುದರಿಂದ ಈ ಲೇಖನದ ಸಂದರ್ಭದಲ್ಲಿ ಮೊದಲಿಗೆ ಒಂದು ಸ್ಪಷ್ಟನೆಯನ್ನು ಮಾಡಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. ಕನ್ನಡದಲ್ಲಿ ನಿರ್ಮಾಣವಾದ ರಾಮಕೃಷ್ಣ-ವಿವೇಕಾನಂದ ಸಾಹಿತ್ಯವನ್ನು ಸ್ಥೂಲವಾಗಿ ಇಬ್ಬಗೆಯಾಗಿ ನೋಡಬಹುದು. ಒಂದು, ರಾಮಕೃಷ್ಣ ಪರಂಪರೆಯ ಯತಿಗಳು ಮತ್ತು ಭಕ್ತರು ದಿವ್ಯತ್ರಯರ ಜೀವನ-ತತ್ತ್ವಗಳ ಪ್ರಸಾರಕ್ಕಾಗಿ ರಚಿಸಿದ ಸಾಹಿತ್ಯ; ಇನ್ನೊಂದು, ಈಗಾಗಲೇ ಕನ್ನಡಸಾಹಿತ್ಯ ಕ್ಷೇತ್ರದಲ್ಲಿ ಕೃಷಿನಿರತರಾಗಿದ್ದು ಅಥವಾ ಆ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ದಿವ್ಯತ್ರಯರ ಪ್ರಭಾವವಲಯಕ್ಕೆ ಬಂದ ಸಾಹಿತಿಗಳು ರಚಿಸಿದ ಸಾಹಿತ್ಯ. ಅಧ್ಯಯನ ಮತ್ತು ಪರಿಶೀಲನೆಗಳ ದೃಷ್ಟಿಯಿಂದ ಇಲ್ಲಿ ಈ ಎರಡನೆಯ ವಲಯವನ್ನು ಮುಖ್ಯವಾಗಿ ಗಮನದಲ್ಲಿ ಇರಿಸಿಕೊಂಡಿದೆ.


ಚಾರಿತ್ರಿಕವಾಗಿ ನೋಡಿದಾಗ ರಾಮಕೃಷ್ಣ-ವಿವೇಕಾನಂದ ವಿಚಾರಧಾರೆ ಕನ್ನಡ ಸಾಹಿತ್ಯದ ಮೇಲೆ ಉಂಟುಮಾಡಿದ ಒಂದು ಮುಖ್ಯವಾದ ಪರಿಣಾಮದ ಬಗೆಗೆ ಮೊದಲಿಗೆ ಪ್ರಸ್ತಾವಿಸಬೇಕು. ಶತಮಾನಗಳ ಉದ್ದಕ್ಕೂ ಕನ್ನಡ ಸಾಹಿತ್ಯವು ಜೈನ, ವೀರಶೈವ, ಶೈವ, ವೈಷ್ಣವ ಮೊದಲಾದ ಕವಲುಗಳಾಗಿ ಒಡೆದಿರುವುದನ್ನು ಕಾಣುತ್ತೇವೆ. ಹಾಗೆಯೇ ಕವಿಗಳೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ತಮ್ಮ ಮತನಿಷ್ಠೆಗಳಿಗೆ ಬದ್ಧರಾಗಿದ್ದುಕೊಂಡೇ ಸಾಹಿತ್ಯ ರಚನೆ ಮಾಡಿದ್ದರು. ಆದರೆ ಆಧುನಿಕ ಸಂದರ್ಭ ಇದಕ್ಕೆ ವ್ಯತಿರಿಕ್ತವಾದ ಪ್ರೇರಣೆಗಳಿಗೆ ತನ್ನನ್ನು ತಾನು ತೆರೆದುಕೊಂಡಿತು. ಯಾವುದನ್ನು ಕನ್ನಡ ವಿಮರ್ಶೆ ಅನಂತರದಲ್ಲಿ 'ನವೋದಯ'ದ ಕಾಲಘಟ್ಟವೆಂದು ಗುರುತಿಸಿತೋ ಆ ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾಲ ತನ್ನನ್ನು ವಿಶಿಷ್ಟಗೊಳಿಸಿಕೊಂಡದ್ದೇ ಉದಾರವಾದಿಯಾದ ಚಿಂತನೆ-ನಿಲವುಗಳಿಂದ. ಇದಕ್ಕೆ ಪ್ರೇರಕವಾದ ಎಲ್ಲವನ್ನೂ ಅದು ಎಲ್ಲ ಕಡೆಗಳಿಂದಲೂ ಸ್ವೀಕರಿಸಿತು. ಸಾಹಿತ್ಯದ ರೂಪ-ಅಭಿವ್ಯಕ್ತಿಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಅದು ಪಾಶ್ಚಾತ್ಯದಿಂದ ಸ್ವೀಕರಿಸಿದರೆ ಮತಾತೀತವಾದ ಅಧ್ಯಾತ್ಮಕ್ಕೆ ಪೌರ್ವಾತ್ಯವು ಪ್ರೇರಣೆಯಾಯಿತು. ಈ ನಿಟ್ಟಿನಲ್ಲಿ ಇಲ್ಲಿ ಪ್ರಾಚೀನ ಭಾರತೀಯ ತಾತ್ತ್ವಿಕತೆಯನ್ನು ಸಮಕಾಲೀನ ಸಂದರ್ಭದಲ್ಲಿ ಮರುವ್ಯಾಖ್ಯಾನಿಸುವ ಪ್ರಯತ್ನಗಳು ನಡೆದವು. ಇದಕ್ಕೆ ಪೂರಕವಾಗಿ ಒದಗಿಬಂದದ್ದು ರಾಮಕೃಷ್ಣ-ವಿವೇಕಾನಂದರ, ಮಹರ್ಷಿ ಅರವಿಂದರ ಹಾಗೂ ಮಹಾತ್ಮ ಗಾಂಧಿಯವರ ಚಳವಳಿ – ಚಿಂತನೆಗಳು. ಈ ಹಿನ್ನೆಲೆಯಿಂದ ನೋಡಿದಾಗ ಕನ್ನಡ ನವೋದಯದ ಆಧ್ಯಾತ್ಮಿಕ ಲಕ್ಷಣವನ್ನು ರೂಪಿಸುವಲ್ಲಿ ರಾಮಕೃಷ್ಣ-ವಿವೇಕಾನಂದರ ಜೀವನ ಸಂದೇಶಗಳು ಪ್ರಮುಖ ಪಾತ್ರವನ್ನು ವಹಿಸಿವೆ.

ಕನ್ನಡದಲ್ಲಿ ಸೃಷ್ಟಿಯಾದ ರಾಮಕೃಷ್ಣ-ವಿವೇಕಾನಂದ ಸಾಹಿತ್ಯ ರಾಶಿಯ ಗುಣಲಕ್ಷಣಗಳ ಬಗೆಗೆ ಒಂದೆರಡು ಸಂಗತಿಗಳನ್ನು ಹೇಳಬೇಕು. ಕನ್ನಡದಲ್ಲಿ ನಿರ್ಮಾಣವಾದ ಸಾಹಿತ್ಯವು ಅನ್ಯತ್ರದಲ್ಲಿ ಎಂದರೆ ಬಂಗಾಳಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ದೊರೆತ ಮೂಲಸಾಮಗ್ರಿಯನ್ನು ಕೇವಲ ಮರುನಿರೂಪಣೆ ಮಾಡಿ ತೃಪ್ತಿಪಟ್ಟುಕೊಳ್ಳಲಿಲ್ಲ. ಅದನ್ನು ಈ ನೆಲದ ಪರಂಪರೆಯ ಮುಂದುವರಿಕೆಯಾಗಿ ಮರುವ್ಯಾಖ್ಯಾನಕ್ಕೆ ಒಳಪಡಿಸಿತು. ಆ ಮೂಲಕ ಹೊಸ ಹೊಸ ಅರ್ಥಪರಂಪರೆಗಳನ್ನು ಅನ್ವೇಷಿಸಿತು. ಇಲ್ಲಿನ ಭಾವಧಾರೆ

ಮತ್ತು ವಿಚಾರಧಾರೆಗಳೆರಡೂ ಮೂಲದ ಅನುಸರಣೆ ಮಾತ್ರವಾಗದೆ ಸಮಕಾಲೀನ ಸನ್ನಿವೇಶಗಳಿಗೆ ತಕ್ಕಂತೆ ವಿಭಿನ್ನ ರೂಪಗಳಲ್ಲಿ ಮೈತಳೆದ ಅಳವಡಿಕೆಯಾಯಿತು. ಇಷ್ಟೇ ಅಲ್ಲದೆ ಅದು ಆತ್ಮಾವಲೋಕನದ ಅನ್ವೇಷಣಾ ಪ್ರಪಂಚವನ್ನೂ ತೆರೆಯಿತು. ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಇಂದಿನವರೆಗೂ ಬೆಳೆದುಬಂದ ರಾಮಕೃಷ್ಣ-ವಿವೇಕಾನಂದ ಸಾಹಿತ್ಯದಲ್ಲಿ ಈ ಚಿಂತನೆಗಳನ್ನು ಗುರುತಿಸುತ್ತೇವೆ.


ಕನ್ನಡದಲ್ಲಿ ಶ್ರೀರಾಮಕೃಷ್ಣರ ಮೊದಲ ಉಪದೇಶ ಸಂಗ್ರಹ ೧೯೧೬ರಲ್ಲಿ ಬೆಂಗಳೂರು ಆಶ್ರಮದಿಂದ ಪ್ರಕಟವಾಯಿತು. ಆ ಕಾಲದ ಸಾಹಿತ್ಯಲೋಕದಲ್ಲಿ ಹೆಸರು ಮಾಡಿದ್ದ ನಂಗಪುರಂ ವೆಂಕಟೇಶಯ್ಯಂಗಾರ್ ಅವರು ಅದನ್ನು ಕನ್ನಡಕ್ಕೆ ಪರಿವರ್ತಿಸಿದ್ದರು; ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಮುನ್ನುಡಿಯನ್ನು ಬರೆದಿದ್ದರು. ಅವರ 'ಮುನ್ನುಡಿ'ಯಲ್ಲಿನ ಒಂದು ಮುಖ್ಯವಾದ ಮಾತು ಹೀಗಿದೆ:

'...ಎಲೈ ರಾಮಕೃಷ್ಣ ಪರಮಹಂಸರೇ! ಪಿತ್ತರೋಗದಿಂದ ರಸನೇಂದ್ರಿಯವು ಕೆಟ್ಟಿರುವಾಗ ನಿಮ್ಮ ಸೂಕ್ತಿಯೆಂಬ ಸವಿಯಾದ ಸಕ್ಕರೆಯೂ ಕಹಿಯಾಗಿರುವುದಲ್ಲವೆ? ಈ ಸಂದರ್ಭದಲ್ಲಿ ಯಾರು ಮಾಡತಕ್ಕುದೇನು? ... ಯಾವನಾದರೊಬ್ಬ ಮನುಷ್ಯನು ವಿವೇಚನೆಯಿಲ್ಲದೆ ''ಇದು ಸರಿ'' ಎಂದು ಮುಂದೆ ಹೊರಟರೆ, ಇತರರೆಲ್ಲರೂ ಆತನನ್ನೇ ಹಿಂಬಾಲಿಸುವುದೂ ಅಥವಾ ಮತ್ತೊಬ್ಬನು ಅವಿವೇಕದಿಂದ ''ಇದು ಸರಿಯಲ್ಲ'' ಎಂದು ಹಿಂಜರಿದರೆ ಉಳಿದವರು ಅವನನ್ನೇ ಅನುಸರಿಸುವುದೂ ನಮ್ಮ ದೇಶದ ಅನೇಕ ಜನರಲ್ಲಿ ಕುರಿಗಳ ಹಿಂಡಿನಲ್ಲಿರುವಂತಹ ಒಂದು ಧರ್ಮವು ನೆಲೆಗೊಂಡಿದೆ...'





ಇದನ್ನು ಉದ್ಧರಿಸಿದುದರ ಉದ್ದೇಶವಿಷ್ಟೆ: ಅಂದಿನ ಕನ್ನಡ ಪ್ರಜ್ಞೆ ರಾಮಕೃಷ್ಣ-ವಿವೇಕಾನಂದರ ಜೀವನ-ಸಂದೇಶಗಳನ್ನು ಕೇವಲ ಅನಾಮತ್ತಾಗಿ ಆಮದು ಮಾಡಿಕೊಳ್ಳುವುದರಲ್ಲಿ ಉತ್ಸುಕವಾಗಲಿಲ್ಲ. ಬದಲಾಗಿ ಸಮಕಾಲೀನ ಸನ್ನಿವೇಶಗಳಿಗೆ ಅದನ್ನು ಅನ್ವಯಿಸಿ ಅರ್ಥೈಸುವುದರಲ್ಲಿ ಮತ್ತು ವ್ಯಾಖ್ಯಾನಿಸುವುದರಲ್ಲಿ ಹೆಚ್ಚಿನ ಆಸ್ಥೆಯನ್ನು ತೋರಿತು. ಈ ದೃಷ್ಟಿಯಿಂದ ನೋಡಿದಾಗ ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಾಹಿತ್ಯರಾಶಿಯು ಭಾವಧಾರೆಗೆ ಹೊಸತೊಂದು ಆಯಾಮವನ್ನೇ ಜೋಡಿಸಿತೆನ್ನಬೇಕು. ಇನ್ನೂ ಕೆಲವು ನಿದರ್ಶನಗಳಿಂದ ಈ ಸಂಗತಿಯನ್ನು ಪುಷ್ಟೀಕರಿಸಬಹುದು.


ಕನ್ನಡದಲ್ಲಿ ಶ್ರೀರಾಮಕೃಷ್ಣರ ಮೊದಲ ಜೀವನಚರಿತ್ರೆ ಪ್ರಕಟವಾದದ್ದು ೧೯೧೯ರಲ್ಲಿ. 'ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ'




ಎಂಬ ಕೃತಿಯನ್ನು ಜಂಟಿಯಾಗಿ ರಚಿಸಿದವರು ಆ ಕಾಲದಲ್ಲಿ ಕನ್ನಡ ಸಾಹಿತ್ಯದ 'ಅಶ್ವಿನೀದೇವತೆ'ಗಳೆಂದೇ ಹೆಸರಾಗಿದ್ದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಮತ್ತು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು. ಕಾಲದ ದೃಷ್ಟಿಯಿಂದಲೂ ಈ ಕೃತಿ ಶ್ರೀರಾಮಕೃಷ್ಣ-ವಿವೇಕಾನಂದರಿಗೆ ಸಮೀಪವಾಗಿರುವುದನ್ನು ಗಮನಿಸಬೇಕು. ಇಷ್ಟಾದರೂ ಇದು ಶ್ರೀರಾಮಕೃಷ್ಣರ ಜೀವನ ಕಥೆಯನ್ನು ಕೇವಲ ಮರುನಿರೂಪಣೆ ಮಾಡಿ ತೃಪ್ತವಾಗುವುದಿಲ್ಲ. ಬದಲಾಗಿ ಶ್ರೀರಾಮಕೃಷ್ಣರ ಜೀವನಸಂದರ್ಭವನ್ನು ಹಿನ್ನೆಲೆಯಾಗಿಸಿಕೊಂಡು ಧರ್ಮ-ಅಧ್ಯಾತ್ಮ-ಯೋಗ-ಅವತಾರ ಮೊದಲಾದವುಗಳಿಗೆ ಸಂಬಂಧಿಸಿದ ತಾತ್ತ್ವಿಕತೆಯನ್ನು ಹಲವು ಆಯಾಮಗಳಲ್ಲಿ ಸಮಕಾಲೀನ ಸನ್ನಿವೇಶಗಳಿಗೆ ಅನ್ವಯಿಸಿ ವಿಮರ್ಶಿಸುತ್ತದೆ. ಇದರಿಂದಾಗಿ ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿಯೇ ಕನ್ನಡದ ಸಂದರ್ಭದಲ್ಲಿ ರಾಮಕೃಷ್ಣ-ವಿವೇಕಾನಂದ ತಾತ್ತ್ವಿಕತೆಗೆ ಹೆಚ್ಚಿನ ಎತ್ತುಗಡೆಯೊಂದು ದೊರಕಿದಂತಾಗಿದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿಯೂ ರಾಮಕೃಷ್ಣ-ವಿವೇಕಾನಂದ ತಾತ್ತ್ವಿಕತೆಗೆ ಸಂಬಂಧಿಸಿದಂತೆ ಹಲವು ಮಜಲುಗಳಿವೆ, ಹಲವು ವಿಸ್ತರಣೆಗಳಿವೆ. ೧೯೩೦ರ ಸುಮಾರಿಗೆ ದ.ರಾ.ಬೇಂದ್ರೆಯವರು ಕೆಲವು ಪತ್ರಿಕೆಗಳಲ್ಲಿ ಶ್ರೀರಾಮಕೃಷ್ಣರ ವ್ಯಕ್ತಿಚಿತ್ರವನ್ನು ಪ್ರಕಟಿಸಿದ್ದರು. ಶ್ರೀರಾಮಕೃಷ್ಣರ ಆಗಮನವನ್ನು ಬೇಂದ್ರೆಯವರು 'ಭರತಭೂಮಿಯಲ್ಲಿ ಆತ್ಮಗಂಗಾವತರಣ' ಎಂದು ಕರೆಯುತ್ತಾರೆ.




ಈಗಿನದು 'ಮಾನವಧರ್ಮವನ್ನು' ಸಾರುವ ಶ್ರೀರಾಮಕೃಷ್ಣ ಮನ್ವಂತರ'ವಾಗಿದ್ದು ಶ್ರೀರಾಮಕೃಷ್ಣರು 'ಆಧುನಿಕ ಮನು' ಎನ್ನುವುದು ಅವರ ಅಭಿಮತ. 'ಎಲ್ಲ ಮತಪಂಥಗಳ ಧರ್ಮ ಸ್ವರೂಪವನ್ನು ಪ್ರಕಾಶಗೊಳಿಸಲು ಶ್ರೀರಾಮಕೃಷ್ಣರ ಅವತಾರವಾಯಿತು. ಆ ಧರ್ಮವು ಮಾನವನು ದೇವನಾಗುವ ಧರ್ಮ' ಎನ್ನುವ ಬೇಂದ್ರೆಯವರು, 'ಶ್ರೀರಾಮಕೃಷ್ಣರಿಂದ ಪ್ರಾರಂಭವಾದ... ಗುರುಮಾಲೆಯು ಭೂಮಿಯನ್ನು ಒಂದು ಅಪ್ಪುಗೆಯಲ್ಲಿ ಹಿಡಿದು ಮಾನವರನ್ನು ಒಂದು ಜಾತಿಗೆ ತರಲು ತವಕಪಡುತ್ತಿದೆ' ಎಂದು ಸಾರುತ್ತಾರೆ. ರಾಮಕೃಷ್ಣ-ವಿವೇಕಾನಂದ ತಾತ್ತ್ವಿಕತೆಯನ್ನು ಹಿನ್ನೆಲೆಯಲ್ಲಿ ಇರಿಸಿಕೊಂಡ ಹಲವು ಕವಿತೆಗಳನ್ನೂ ಬೇಂದ್ರೆಯವರು ರಚಿಸಿದ್ದಾರೆ.

ಡಿ.ವಿ.ಜಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮುಂತಾದವರು ತಮ್ಮ ಬರಹಗಳಲ್ಲಿ ರಾಮಕೃಷ್ಣ -ವಿವೇಕಾನಂದರ ಹಲವು ಮಗ್ಗಲುಗಳನ್ನು ಸ್ಪರ್ಶಿಸಿರುವುದನ್ನು ಕಾಣುತ್ತೇವೆ. ಇವೆಲ್ಲವೂ ಒಂದು ಕಡೆಯಾದರೆ, ರಾಮಕೃಷ್ಣ-ವಿವೇಕಾನಂದರನ್ನು ತಮ್ಮ ಸಾಹಿತ್ಯಮಂಟಪದಲ್ಲಿ ಶಾಶ್ವತವಾಗಿ ಸ್ಥಾಪಿಸಿ ಆ ಮೂಲಕ ತಮ್ಮ ಸೃಜನಶೀಲತೆಯ ಮೂಲ ಸ್ರೋತವನ್ನು ಗುರುತಿಸಿಕೊಂಡವರೆಂದರೆ ನಿಸ್ಸಂದೇಹವಾಗಿ ಕುವೆಂಪು ಅವರೇ. ಅವರೇ ಹೇಳಿಕೊಂಡಿರುವಂತೆ,

'ನನ್ನದೆಯಲಿ ಮನೆ ಮಾಡಿಹಗೆ
ಕವಿತೆಯ ನೀಡಿಹಗೆ
ಹರಿಹರರೂಪದ ಪಾವನಗೆ-
ವಿಶ್ವದ ಕಾವನಿಗೆ,
ಯೋಗೀಶ್ವರನಿಗೆ, ಜಗದೀಶ್ವರನಿಗೆ...'
ಶ್ರೀ ಗುರುದೇವನಿಗೆರಗುವೆನು !'

ಕುವೆಂಪು ಅವರ ಕಾವ್ಯದಲ್ಲಿ ರಾಮಕೃಷ್ಣ-ವಿವೇಕಾನಂದರಿಗೆ ಸಂಬಂಧಿಸಿದಂತೆ ಆರಾಧನೆ, ನಿವೇದನೆ, ಆರ್ದ್ರತೆ ಪ್ರಧಾನ ನೆಲೆಯಲ್ಲಿದ್ದರೆ ಜೀವನಚರಿತ್ರೆಯೇ ಮೊದಲಾದ ಅವರ ಗದ್ಯ ಬರಹಗಳಲ್ಲಿ ಚಿಂತನೆ, ವಿವೇಚನೆ, ವಿಶ್ಲೇಷಣೆಯೇ ಮೊದಲಾದ ಸಂಗತಿಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಯಾವುದೇ ತಾತ್ತ್ವಿಕತೆಯೊಂದು ಹೇಗೆ ಸಾಹಿತ್ಯರಚನೆಯ ಹಲವು ಎಳೆಗಳಲ್ಲಿ ವಿಸ್ತರಿಸಿಕೊಂಡು ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆಯಬಲ್ಲುದು ಎನ್ನುವುದಕ್ಕೆ ಕುವೆಂಪು ಅವರ ಸಾಹಿತ್ಯ ವಿಶಿಷ್ಟವಾದ ನಿದರ್ಶನವಾಗಿದೆ.

ಅನಂತರದ ತಲೆಮಾರಿನಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಪ್ರಭುಶಂಕರ ಮೊದಲಾದವರು ರಾಮಕೃಷ್ಣ-ವಿವೇಕಾನಂದ ಚಿಂತನಧಾರೆ ಹಾಗೂ ಭಾವಧಾರೆಗಳ ವಲಯಗಳನ್ನು ಹಲವು ಮಗ್ಗಲುಗಳಲ್ಲಿ ಹಿಗ್ಗಿಸಿರುವುದನ್ನು ನೋಡುತ್ತೇವೆ. ಮುಖ್ಯವಾಗಿ ರಾಮಕೃಷ್ಣ-ವಿವೇಕಾನಂದ ಸಂದರ್ಭ ಎನ್ನುವುದು ಆಧುನಿಕ ಸಮಾಜಕ್ಕೆ ಅಗತ್ಯವಾದ ಲೋಕರಚನೆಯನ್ನು, ವಿವೇಕದೃಷ್ಟಿಯನ್ನು ಕಟ್ಟಿಕೊಟ್ಟಿದೆ. ಈ ಪ್ರೇರಣೆ ಕೇವಲ ಅಧ್ಯಾತ್ಮಕ್ಕೆ ಸೀಮಿತವಾಗದೆ ಹೊಸ ಸಮಾಜದ ದರ್ಶನವನ್ನು ರೂಪಿಸಿಕೊಳ್ಳುವುದಕ್ಕೂ ನೆರವಾಗಿದೆ.

'ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಕನ್ನಡ ನುಡಿ ಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ.....

ಎಂಬ ಕುವೆಂಪು ಅವರ ಸಮನ್ವಯ ಸಮಾಜದಲ್ಲಿ ಪರಮಹಂಸರ ದರ್ಶನವೇ ಮೂರ್ತಿವೆತ್ತಾಗಿದೆ. 'ಶ್ರೀರಾಮಕೃಷ್ಣ ವಚನವೇದ'ದ ಮೂಲಕ ಅವರು ಭಾರತದ ರಾಜ್ಯಾಂಗಕ್ಕೆ ಪೂರಕವಾದ ಧಾರ್ಮಿಕ ರಾಜ್ಯಾಂಗವನ್ನು ಸ್ಥಾಪಿಸುತ್ತಾರೆ. ಹೀಗೆ ಕನ್ನಡತನವನ್ನು ವಿಶ್ವಮಾನತೆಗೆ ವಿಸ್ತರಿಸುವ ಕಾಣ್ಕೆಯ ಭಾಗವಾಗಿ ರಾಮಕೃಷ್ಣ-ವಿವೇಕಾನಂದ ಭಾವಧಾರೆ ಕನ್ನಡದಲ್ಲಿ ಅಚ್ಚಳಿಯದ ಗುರುತನ್ನು ಮೂಡಿಸಿದೆ. ✽

"ಮನಸ್ಸನ್ನು ಭಗವಂತನ ಮೇಲೆ ನಿಲ್ಲಿಸಿ, ಅವನನ್ನು ಪಡೆಯುತ್ತೇನೆಂದು ದೃಢ ಸಂಕಲ್ಪ ಮಾಡಿ. ಪ್ರಪಂಚದಲ್ಲಿ ಏನೂ ಇಲ್ಲ, ಎಲ್ಲವೂ ದುಃಖಮಯ. ಕೆಲಸಕ್ಕೆ ಬಾರದ ವಸ್ತುವೆಂದು ಇದನ್ನು ನೋಡಿ. ನೀವು ದುಃಖದಿಂದ ಪಾರಾಗಿ ಹೋಗಬೇಕು. ಭಗವಂತನ ಕ್ಷಣಿಕ ನೋಟವೊಂದು ದೊರೆತರೆ ಅನಂತ ಆನಂದವಾಗುವುದು. ವಿಷಯ ಸುಖದ ಮೋಹ ಮಾಯವಾಗುವುದು. ಒಮ್ಮೆ ದೇವರ ಹತ್ತಿರ ನೀವು ಬಂದರೆ ಅಂಜಿಕೆ ಆತಂಕಗಳಿಗೆ ಅಲ್ಲಿ ಎಡೆ ಇಲ್ಲ. ಪ್ರಾಪಂಚಿಕ ವಸ್ತುವನ್ನು ತೊರೆದು ಆತನ ಪಾದಪದ್ಮಗಳಲ್ಲಿ ಮಾತ್ರ ನೆಲೆಸಿರಿ."

— ಸ್ವಾಮಿ ಬ್ರಹ್ಮಾನಂದ